27 The Kirloskar Electric Company Employees HBCS. Ltd. Bangalore;
28 The Reserve Bank of India Staff Coop. Housing Society Ltd Bangalore
29 National HBCs.
30 Amarjyothi HBCS
31 Vinayaka H.B.CS. (Vyalikaval)
32 Kodandarama HBCS. Bangalore
33 NTI HBCS Ltd.
34 Vijaya Bank Employees HBCS.
35 Coffee Board Employees HBCS. Ltd.
36 Jayanagara HBCS Ltd. Bangalore
37 Reflex HBCS. Ltd.

ಶ್ರೀ ಡಿ.ಎ. ಚಿನ್ನಪ್ಪ.—ಈಗ ಜಿ.ವಿ.ಕೆ. ರಾವ್ ವರದಿಯಲ್ಲಿ ಕಂಡುಬಂದ ಅಂಶಗಳ ಪ್ರಕಾರ ಭೂ ಸ್ವಾಧೀನದ ಬಗ್ಗೆ ಹೇಳಿದ್ದೀರಿ. ಆದರೆ ೧೯ ಸಹಕಾರ ಸೊಸೈಟಿಗಳಲ್ಲಿ ಇವರು ಭೂ ಸ್ವಾಧೀನ ಮಾಡಿದ್ದರೂ ಸಹ ನಿವೇಶನವನ್ನು ಹಂಚಲು ಬಿಟ್ಟಿಲ್ಲ ಎಂದು ಹೇಳಿ ಉತ್ತರದಲ್ಲಿ ಹೇಳಿದ್ದೀರಿ. ಆಗಿದ್ದ ಪಕ್ಷದಲ್ಲಿ ಭೂ ಸ್ವಾಧೀನ ಮಾಡಿದ ನಿವೇಶನವನ್ನು ಹಂಚಲಿಕ್ಕೆ ಏತಕ್ಕೆ ಬಿಟ್ಟಿಲ್ಲ. ಎಂದು ಕೇಳುತ್ತೇನೆ, ತದನಂತರ ೩೭ ಸೊಸೈಟಿಗಳ ಮೇಲೆ ಇವರು ಆಕ್ಷನ್ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆ ೩೭ ಸೊಸೈಟಿಗಳಲ್ಲಿ ಯಾವ ಯಾವ ಕ್ರಮಗಳು ಯಾವ ಯಾವ ಹಂತದಲ್ಲಿದೆ ಎಂದು ಮಾನ್ಯ ಮಂತ್ರಿಗಳನ್ನು ಕೇಳತ್ತಿದ್ದೇನೆ

ಡಾ॥ ಹೆಚ್. ಆರ್. ರಾಜು.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ. ಜಿ.ವಿ.ಕೆ. ರಾವ್ ಕಮಿಟಿ ರಿಪೋರ್ಟ್ ಬಗ್ಗೆ ನಿವೇಶನ ಏತಕ್ಕೆ ಹಂಚಿಲ್ಲ ಎಂದು ಕೇಳಿದ್ದಾರೆ. ಅದರ ಬಗ್ಗೆ ಹೇಳಬೇಕಾದರೆ ಅವ್ಯವಹಾರ ನಡೆದಿದೆ ಎಂದು ಗೊತ್ತಾದ ಮೇಲೆ ಮತ್ತೆ ಆ ಸಹಕಾರ ಸಂಘಗಳಿಗೆ ನಿವೇಶನ ಹಂಚಲಿಕ್ಕೆ ಅನುಮತಿ ಕೊಡುವುದು ಒಳ್ಳೆಯದಲ್ಲ ಎಂದು ತಿಳಿದುಕೊಂಡು ಸೆಷನ್ ೩೦ ರ 'ಬಿ' ಪ್ರಕಾರ ನಿವೇಶನ ಹಂಚುವುದು ಅವಾಯ್ಡ್ ಮಾಡಿದ್ದೇವೆ.

ಶ್ರೀ.ಡಿ. ಎ. ಚಿನ್ನಪ್ಪ.—೩೭ ಸೊಸೈಟಿಗಳ ಮೇಲೆ ತೆಗೆದುಕೊಂಡಿರತಕ್ಕ ಕ್ರಮಗಳು ಯಾವ ಯಾವ ಹಂತದಲ್ಲಿದೆ.

ಡಾ. ಹೆಚ್. ಆರ್. ರಾಜು.—೩೭ ಸೊಸೈಟಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದು ಅದು ಅಂತಿಮ ರೂಪದಲ್ಲಿದೆ.

ಶ್ರೀ ಡಿ. ಎ. ಚಿನ್ನಪ್ಪ.—ತಾವು ಏನೇನು ಕ್ರಮ ತೆಗೆದುಕೊಂಡಿದ್ದೀರಿ. ಅದು ಯಾವ ಹಂತದಲ್ಲಿದೆ ಎಂಬ ವಿವರಗಳನ್ನು ಹೇಳುತ್ತೀರಾ?

ಡಾ॥ ಹೆಚ್. ಆರ್. ರಾಜು.—ಅದರ ಬಗ್ಗೆ ವಿವರ ಇಲ್ಲ. ಆದರೆ ೩೭ ಸೊಸೈಟಿಗಳ ಮೇಲೂ ಕ್ರಮ ತೆಗೆದುಕೊಂಡಿದ್ದೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಶಿವಮೊಗ್ಗದಲ್ಲಿರುವ ಎ. ಪಿ. ಎಂ. ಸಿ. ಸೊಸೈಟಿಯು ಹಣ, ಗ್ರಾಮಾಂತರ ರಸ್ತೆ, ಕಾಮಗಾರಿಗಳಿಗೆ ಖರ್ಚು

೧೧೪೪ ಶ್ರೀ ಯು. ಕೆ, ಶಾಮಣ್ಣ (ಶೃಂಗೇರಿ).—ಮ್ಯಾನ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ಎಪಿಎಂಸಿ ಸೊಸೈಟಿಯಲ್ಲಿ ರೈತರಿಂದ ಸಂಗ್ರಹಿಸಿದ ಸೆಸ್ ಹಣವನ್ನು ಗ್ರಾಮಾಂತರ ಪ್ರದೇಶದ ಆಯಾಯಾ ಭಾಗದ ರಸ್ತೆಗಳ ದುರಸ್ತಿಗೆ ಕೊಡಲಾಗಿದೆಯೆ;

ಆ) ಹಾಗಿದ್ದಲ್ಲಿ ಯಾವ ಯಾವ ರಸ್ತೆಗಳ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ಹಾಗೂ ಅದರಲ್ಲಿ ಖರ್ಚಾಗಿರುವ ಹಣವೆಷ್ಟು?,

ಡಾ॥ ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಅನಧಿಕೃತವಾಗಿ ಭೂಮಿ ಸಾಗುವಳಿ

೧೨೩೩. ಶ್ರೀ ಬಿ. ಶಿವರಾಂ (ಗಂಡಸಿ).—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆಯಲ್ಲಿ ಒಟ್ಟು ಎಷ್ಟು ಎಕರೆ ಭೂಮಿ ಅನಧಿಕೃತವಾಗಿ ಸಾಗುವಳಿಗೆ ಒಳಪಟ್ಟಿದೆ, ಮತ್ತು ಎಷ್ಟು ಎಕರೆ ಅನಧಿಕೃತ ಸಾಗುವಳಿ ಭೂಮಿಗೆ ಟಿ.ಟಿ. ಹಾಗಿದೆ.

ಆ) ಭೂರಹಿತ ಹರಿಜನ, ಗಿರಿಜನರಿಂದ ಎಷ್ಟು ಎಕರೆ ಭೂಮಿಯು ಹಾಸನ ಜಿಲ್ಲೆಯಲ್ಲಿ ಅನಧಿಕೃತವಾಗಿ ಸಾಗುವಳಿ ಆಗಿದೆ ಮತ್ತು ಭೂರಹಿತ ಹರಿಜನ ಗಿರಿಜನರಿಗೆ ಅಂತಹ ಭೂಮಿಯನ್ನು ಸಕ್ರಮ ಮಾಡಲು ಸರ್ಕಾರವು ಉದ್ದೇಶಿಸಿದೆಯೇ.

ಇ) ಟಿ.ಟಿ. ಹಾಕಲ್ಪಟ್ಟ ಜಮೀನು ಯಾವ ನಿಬಂಧನಕ್ಕೆ ಒಳಗಾದರೆ ಭೂಮಿ ಸಕ್ರಮ ಮಾಡಲು ಕಾನೂನಿನಲ್ಲಿ ಅವಕಾಶವಿದೆ.

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ೮೪೧.೧೫೧ ಎಕರೆ ೨೩ ಗುಂಟೆ ೩೧–೫–೧೯೯೦ ರವರೆಗೆ
೧೫೫.೧೬೬ ಎಕರೆ ೩೨ ಗುಂಟೆ ೩೧–೫–೧೯೯೦ ರವರೆಗೆ
ಟಿ.ಟಿ. ಜಂಲ್ಮಾನೆಯನ್ನು ವಿಧಿಸಲಾಗಿದೆ.

ಆ) ೧೭.೪೫೫ ಎಕರೆ ೩೬ ಗುಂಟೆ ೩೧–೫–೧೯೯೦ ರವರೆಗೆ
ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಚೊಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸಬೇಕಾದ ೨೨ನೇ ಪಟ್ಟಿಯಲ್ಲಿರುವ ಚುಕ್ಕಿಗುರುತಿಲ್ಲದ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದಿಡುತ್ತೇನೆ.

ಮಧುಗಿರಿ ತಾಲ್ಲೂಕಿನ ಪುಲಮಂಥಟ್ಟು ಸ, ನಂ. ೮೮ ರಿಂದ ೯೧ರ ಮಂಜೂರಾತಿ

೧೩೧೬. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತಂಮಿಳ್‌ನಾಡು ಜಿಲ್ಲೆ ಮಧುಗಿರಿ ತಾಲ್ಲೂಕು ಪುಲಮಂಥಟ್ಟು ಸರ್ವೆ ನಂ. ೮೮.೪೯,೯೦,೯೧ರಲ್ಲಿ ಜಮೀನು ಸಾಗು ಮಾಡುತ್ತಿದ್ದು ಎಲ್.ಎನ್.ಡಿ.ಆರ್.ಯು.ಸಿ ೧೮೦–೭೭–೭೮ರಲ್ಲಿ ಯಾರು ಯಾರಿಗೆ ಜಮೀನು ಮಂಜೂರು ಮಾಡಲು ಕಡತ ತಯಾರಿಸಲಾಗಿದೆ.

ಆ) ಈ ಜಮೀನನ್ನು ಯಾರು ಯಾರಿಗೆ ಸಾಗುವಳಿಗೆ ನೀಡಲಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ವಿವರಗಳು ಒಡನೆಯೇ ಲಭ್ಯವಿರುವುದಿಲ್ಲ.

ಆ) ಒಟ್ಟು ೧೮ ಜನರಿಗೆ ಸಾಗುವಳಿಗಾಗಿ ಜಮೀನು ಮಂಜೂರು ಮಾಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ).